ಮಾನ್ಯ ಸದಸ್ಯರು ಏನು ಅವಶ್ಯಕತೆ ಇದೆ ಎಂದು ಹೇಳುತ್ತಾರೆ ಅದನ್ನು ನಾನು ನಿರಾಕರಣೆ ಮಾಡುತ್ತಿಲ್ಲ. ಅವಶ್ಯಕತೆ ಇದೆ. ಹೆಚ್ಚು ಕಟ್ಟಡವನ್ನು ಕಟ್ಟಬೇಕಾಗುತ್ತದೆ.

10.50 ಎ.ಎಂ

ಆದರೆ ಆ ಪ್ರಸ್ತಾವನೆ ಸರ್ಕಾರಕ್ಕೆ ಬಂದ ಮೇಲೆ ಹಣದ ಪರಿಸ್ಥಿತಿಯನ್ನು ನೋಡಿಕೊಂಡು ಅದನ್ನು ವ್ಯವಸ್ಥೆಗೊಳಿಸುತ್ತೇವೆ. ಇನ್ನು ಕೊಪ್ಪಾದಲ್ಲಿ ಹಳೆಯ ಕಾಲದ ಟಿ.ಬಿ. ಇದೆ. 1940ರಲ್ಲಿ ನಾಲ್ಕು ಕೊಠಡಿಯುಳ್ಳ ಪರಿವೀಕ್ಷಣಾ ಮಂದಿರವನ್ನು ಕಟ್ಟಲಾಗಿದೆ. ಕಳೆದ ಎರಡು ವರ್ಷಗಳಲ್ಲಿ 41 ಸಾವಿರ ರೂಪಾಯಿಗಳ ವೆಚ್ಚದಲ್ಲಿ ದುರಸ್ತಿ ಮಾಡಲಾಗಿದೆ. 1992 ಮಾರ್ಚಿಯಲ್ಲಿ ಎರಡು ಕೊಠಡಿಗಳನ್ನು ಆಧುನೀಕರಿಸಲಾಯಿತು. ಉಳಿದ ಎರಡು ಕೊಠಡಿಗಳನ್ನು ಸಹ ಸುಮಾರು ಒಂದು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಆಧುನೀಕರಿಸುವ ಅವಶ್ಯಕತೆ ಇರುತ್ತದೆ. ಸದರಿ ಪರಿವೀಕ್ಷಣಾ ಮಂದಿರಕ್ಕೆ ಪಾಕ ಶಾಲೆ, ಊಟದ ಹಾಲ್ ಇತ್ಯಾದಿಗಳ ಅವಶ್ಯಕತೆ ಇರುತ್ತದೆ. ಈ ಕಾಮಗಾರಿಗಳಿಗೆ ಸುಮಾರು ಎರಡು ಲಕ್ಷ ರೂಪಾಯಿಗಳು ಬೇಕಾಗಬಹುದೆಂದು ಇಲಾಖೆಯವರು ಆದರ ಒಂದು ಪರಿಸ್ಥಿತಿಯನ್ನು ಸರ್ಕಾರಕ್ಕೆ ತಿಳಿಸಿದ್ದಾರೆ. ಹಾಗೆಯೇ ಎನ್.ಆರ್. ಪುರದಲ್ಲಿಯೂ ಕೂಡ ಎರಡು ಕೊಠಡಿಯುಳ್ಳ ಪರಿವೀಕ್ಷಣ ಮಂದಿರವನ್ನು 1940ರಲ್ಲಿ ನಿರ್ಮಿಸಲಾಯಿತು. ಇದು ಸಹ ಹಳೆಯದು. ಬಹಳ ಮಟ್ಟಿಗೆ ಒಳ್ಳೆಯ ಸ್ಥಿತಿಯಲ್ಲಿ ಇರಲಿಕ್ಕಿಲ್ಲವೆಂಬುದು ನನ್ನ ಅಭಿಪ್ರಾಯ ಕೂಡ. ಕಳೆದ ಎರಡು ವರ್ಷಗಳಲ್ಲಿ ಸುಮಾರು 18 ಸಾವಿರ ರೂಪಾಯಿಗಳ ವೆಚ್ಚದಲ್ಲಿ ದುರಸ್ತಿ ಮಾಡಲಾಗಿದೆ. ಈ ಸ್ಥಳವು ಯಾತ್ರಸ್ಥಳವಾಗಿರುವುದರಿಂದ ಇಲ್ಲಿ ವಸತಿ ಸೌಕರ್ಯ ಸಾಲದಾಗಿದ್ದು ಸುಮಾರು 8 ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ಹೆಚ್ಚುವರಿ ಕೊಠಡಿಗಳನ್ನು ನಿರ್ಮಿಸುವ ಅವಶ್ಯಕತೆ ಇರುವುದಾದರೂ ಈ ಬಗ್ಗೆ ಇನ್ನೂ ಸರ್ಕಾರಕ್ಕೆ ಪ್ರಸ್ತಾವನೆಗಳು ಬಂದಿಲ್ಲ. ಆದುದರಿಂದ ಸುಳ್ಳು ಮಾಹಿತಿಯನ್ನು ಸರ್ಕಾರ ಸದನಕ್ಕೆ ಏನೂ ಕೊಟ್ಟಿಲ್ಲ ಮತ್ತು ಮಾನ್ಯ ಸದಸ್ಯರಿಗೂ ಕೊಟ್ಟಿಲ್ಲ. ಆದರ ಅವಶ್ಯಕತೆ ಇದೆ, ಹಣದ ಪರಿಸ್ಥಿತಿಯನ್ನು ನೋಡಿಕೊಂಡು ಕೆಲಸಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಯು.ಕೆ. ಶಾಮಣ್ಣ:– ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಪ್ರಸ್ತಾವನೆ ಇನ್ನೂ ಬಂದಿಲ್ಲದೇ ಹೋದರೂ ಮಾನ್ಯ ಮಂತ್ರಿಗಳು ಈಗಾಗಲೇ ಆದರ ಅವಶ್ಯಕತೆ ಇದೆ ಎಂದು ಹೇಳಿರುವುದರಿಂದ ದಯಮಾಡಿ ಈ ಸಾಲಿನ ಬಡ್ಜೆಟ್‌ನಲ್ಲಿ ಇದನ್ನು ಸೇರಿಸುವಂತಹ ವ್ಯವಸ್ಥೆಯಾಗಲಿ ಮತ್ತು ಬೇರೆ ರೂಪದಲ್ಲಿ ಹಣವನ್ನು ಕೊಡುವ ಮೂಲಕವಾಗಲಿ ಈ ಕೆಲಸವನ್ನು ತೆಗೆದುಕೊಳ್ಳಬೇಕು. ಮಳೆಗಾಲದಲ್ಲಿ ಮಾತ್ರ ರಿಪೇರಿ ಮಾಡಿದ್ದರು. ಎರಡು ಟಿ.ಬಿ.ಯನ್ನು ಮಾತ್ರ ಬಿಟ್ಟರೆ ಬೇರೆಯದ್ದನ್ನು ಮಾಡಿಲ್ಲ. ಆದ್ದರಿಂದ ದಯಾಮಾಡಿ ರಿಪೇರಿ ಮಾಡುವಂತಹ ವ್ಯವಸ್ಥೆಯನ್ನು ಮಾಡಿದರೆ ನಮ್ಮ ಮರ್ಯಾದೆ ಉಳಿಯುತ್ತದೆ. ಹೊರಗಡೆಯಿಂದ ಬಂದವರಿಗೆ ಸರ್ಕಾರಿ ಟಿ.ಬಿ. ಇಲ್ಲ. ಟ್ರಾವಲರ್ಸ್ ಬಂಗಲೆ ಇಲ್ಲವೆಂದು ಹೇಳತಕ್ಕಂಥ ಕೊರತೆಯನ್ನು ನೀಗಿಸಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್:– ಆದನ್ನು ಗಮನಿಸುತ್ತೇನೆ.

ಚಿಕ್ಕೋಡಿ ತಾಲ್ಲೂಕಿನ ಕಬ್ಬೂರು ಗ್ರಾಮದಿಂದ ರಾಯ್‌ಬಾಗ್ ತಾಲ್ಲೂಕು ಕೇಂದ್ರಕ್ಕೆ ಇರುವ ರಸ್ತೆಗಳ ಡಾಂಬರೀಕರಣ

238: ಶ್ರೀ ಎಸ್.ಎಸ್. ಭೀಮಣ್ಣನವರು (ಚಿಕ್ಕೋಡಿ):– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಳಗಾಂ ಜಿಲ್ಲೆ, ಚಿಕ್ಕೋಡಿ ತಾಲ್ಲೂಕಿನ ಕಬ್ಬೂರು ಗ್ರಾಮದಿಂದ ರಾಯ್‌ಬಾಗ್ ತಾಲ್ಲೂಕು ಕೇಂದ್ರಕ್ಕೆ ಇರುವ ರಸ್ತೆ ಸಂಚಾರ ಯೋಗ್ಯವಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದಲ್ಲಿ, ಇದರ ಡಾಂಬರೀಕರಣಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ. ಈ ಕಾರ್ಯವನ್ನು ಎಂದು ಪೂರ್ಣಗೊಳಿಸಲಾಗುವುದು ?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ. ಸದರಿ ರಸ್ತೆಯು ರಾಯಭಾಗ– ಕಬ್ಬೂರು ಮುಖ್ಯ ಜಿಲ್ಲಾ ರಸ್ತೆಯ ಭಾಗವಾಗಿದ್ದು ಸಂಚಾರಕ್ಕೆ ಯೋಗ್ಯವಾಗಿರುವಂತೆ ನಿರ್ವಹಿಸಲಾಗಿದೆ.

ಆ. ಈ ರಸ್ತೆಯು ಒಟ್ಟು 17.50 ಕಿಮಿ. ಉದ್ದವಿದ್ದು ಅತಿ ಕೆಟ್ಟು ಹೋಗಿದ್ದ ಸುಮಾರು 4.50 ಕಿಮಿ ಆಯ್ದ ಭಾಗಗಳನ್ನು ದುರಸ್ತಿ ಪಡಿಸಲಾಗಿದೆ. ಹಾಗೂ 1.75 ಕಿಮಿ. ಉದ್ದವನ್ನು ಅಭಿವೃದ್ಧಿಪಡಿಸುವ ಕಾರ್ಯಕ್ರಮ ಹಾಕಿಕೊಳ್ಳಲಾಗಿದ್ದು ಅದರಲ್ಲಿ 1.00 ಕಿಮಿ.ಉದ್ದಕ್ಕೆ ಡಾಂಬರೀಕರಣ ಮಾಡುವ ಬಗ್ಗೆ ಗುತ್ತಿಗೆಗಳನ್ನು ಕರೆಯಲಾಗಿದೆ.

ಇ. ಅನುದಾನದ ಲಭ್ಯತೆಯನ್ನು ಅನುಸರಿಸಿ ಹಂತ ಹಂತವಾಗಿ ಈ ರಸ್ತೆಯ ಡಾಂಬರೀಕರಣವನ್ನು ಮಾಡುವ ಪ್ರಸ್ತಾಪವಿದೆ.

ಶ್ರೀ ಎಸ್.ಎಸ್. ಭೀಮಣ್ಣನವರು:– ಮಾನ್ಯ ಅಧ್ಯಕ್ಷರೇ, ಪ್ರಶ್ನೆಗೆ ಉತ್ತರ ಬಂದಿದೆ. ಇಲ್ಲಿ ಬಡ್ಜೆಟ್‌ನಲ್ಲಿ ಕೆಲವೊಂದು ಕಾಮಗಾರಿಗಳನ್ನು ಸೂಚಿಸಿದೆ ಎಂದು ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ. ಬಡ್ಜೆಟ್‌ನಲ್ಲಿ ಹಾಕಿದರೆ ಈ ಕೆಲಸ ಪೂರ್ಣವಾಗುತ್ತದೆ ಎಂದು ಹೇಳಬಯಸುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್:– ಅವರು ಪ್ರಶ್ನೆಯನ್ನೇ ಹಾಕಲಿಲ್ಲ.

ಅಧ್ಯಕ್ಷರು:– ಅವರು ಉತ್ತರ ಬಂದಿದೆ ಎಂದು ಹೇಳಿದರು.

ಶ್ರೀ ಕೆ. ಹೆಚ್. ರಂಗನಾಥ್:– ಚಿಕ್ಕೋಡಿ ತಾಲ್ಲೂಕಿನ ಕಬ್ಬೂರು ಗ್ರಾಮದಿಂದ ರಾಯಭಾಗ್‌ಗೆ ಕೇಂದ್ರಕ್ಕೆ ಹೋಗುವ ರಾಯ್‌ಭಾಗ್ – ಕಬ್ಬೂರ್ ರಸ್ತೆಯು ಜಿಲ್ಲಾ ಮುಖ್ಯ ರಸ್ತೆಯಾಗಿದ್ದು ಸುಮಾರು 12.8 ಕಿ.ಮೀ ನಿಂದ 29.30 ಕಿ.ಮೀ ವ್ಯಾಪ್ತಿಯಲ್ಲಿ ಈ ರಸ್ತೆ ಬರುತ್ತದೆ. ಇದು ರಸ್ತೆಯಾಗಿದ್ದು ರಾಯ್‌ಭಾಗ್‌ಗೆ ಸಕ್ಕರೆ ಕಾರ್ಖಾನೆ ವ್ಯಾಪ್ತಿಯಲ್ಲಿ ಬರುವುದರಿಂದ ಕಬ್ಬಿನ ಲಾರಿಗಳ ಪ್ರಯಾಣ ಜಾಸ್ತಿಯಾಗಿರುವುದರಿಂದ ರಸ್ತೆಗಳು ಕೆಟ್ಟಿವೆ ಎಂಬುದು ಸರ್ಕಾರದ ಗಮನಕ್ಕೂ ಕೂಡ ಬಂದಿವೆ. ಹೀಗೆ ಕೆಟ್ಟು ಹೋಗಿರುವ ಭಾಗಗಳಲ್ಲಿ ದುರಸ್ತಿ ಕೂಡ ಮಾಡಲಾಗಿದೆ. ಪ್ರಸಕ್ತ 1.75ಕಿ.ಮೀ ಉದ್ದದ ಆಯ್ದ ಭಾಗಗಳನ್ನು ಅಭಿವೃದ್ಧಿಪಡಿಸುವ ಕಾಮಗಾರಿಗಳನ್ನು ಕೂಡ ಸರ್ಕಾರ ಕೈಗೆತ್ತಿಕೊಂಡಿದೆ. ಅದು ಅಲ್ಲದೆ 1 ಕಿ.ಮೀ. ಉದ್ದಕ್ಕೆ ಡಾಂಬರೀಕರಣ ಮಾಡುವ ಸಲುವಾಗಿ ಗುತ್ತಿಗೆಯನ್ನು ಕರೆಯಲಾಗಿದೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್:– 17 ಕಿ.ಮೀ ರಸ್ತೆಯಲ್ಲಿ 7 ಕಿಮೀ ರಸ್ತೆಯನ್ನು ದುರಸ್ತಿ ಮಾಡುವುದಕ್ಕೆ ತಾವು ಕ್ರಮ ತೆಗೆದುಕೊಂಡಿದ್ದೀರಿ. ಇನ್ನು 10 ಕಿ.ಮೀ ಪೂರ್ತಿ ಹಾಳಾಗಿದೆ. ರಸ್ತೆ ಸಂಚಾರ ಮಾಡುವುದಕ್ಕೆ ಅನರ್ಹವಾಗಿದೆ. ಕೊನೆಯ ಪಕ್ಷ ಪಾಟ್‌ಹೋಲ್ಸ್ ತುಂಬಿಸಿ; ರಾಯ್‌ಭಾಗ್‌ವರೆಗೆ ಪ್ರಯಾಣ ಮಾಡುವುದಕ್ಕೆ ಅನುಕೂಲ ಮಾಡಿಕೊಡುತ್ತೀರಾ ?

ಶ್ರೀ ಕೆ. ಹೆಚ್. ರಂಗನಾಥ್:– 1993-94ರ ಆಯವ್ಯಯದಲ್ಲಿ ಈ ರಸ್ತೆ ಅಭಿವೃದ್ಧಿ ಮಾಡಬೇಕೆಂದು 18 ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ತೆಗೆದುಕೊಳ್ಳಬೇಕೆಂಬ ಪ್ರಸ್ತಾವನೆಯನ್ನು ಮುಖ್ಯ ಇಂಜಿಯರ್ ಸಲ್ಲಿಸಿದ್ದಾರೆ. ಅದರ ಬಗ್ಗೆ ಸರ್ಕಾರ ಪರಿಶೀಲಿಸುತ್ತದೆ.